Reg. No. | | | | | | | | |

# BCAKALN 201

## II Semester B.C.A. Degree Examination, September 2022
## (NEP-2020) (2021 – 22 Batches Onwards)
## KANNADA LANGUAGE (AECC)

Time : 2 Hours                                                                 Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸುವುದು. **(3×8=24)**

1) ಜೇಡರ ದಾಸಿಮಯ್ಯನ ವಚನಗಳು ಸಮಾಜವನ್ನು ಎಚ್ಚರಿಸುವ ಬಗೆ ಹೇಗೆ ? ಚರ್ಚಿಸಿರಿ.

**ಅಥವಾ**

ಅಳುತ್ತಾ ಭೀಮನಲ್ಲಿಗೆ ಬಂದ ದ್ರೌಪದಿಯು ಕೊನೆಗೆ ನಗುತ್ತಾ ಹಿಂತಿರುಗುವ ಸನ್ನಿವೇಶವು ರನ್ನನಲ್ಲಿ ಚಿತ್ರಿತಗೊಂಡ ಬಗೆಯನ್ನು ವಿವರಿಸಿರಿ.

2) ಸ್ಮರಣ ಶಕ್ತಿಯನ್ನು ಹೆಚ್ಚಿಸಲು ಹರ್ಬಟ್ ಪೋಲನ್ನರು ಸೂಚಿಸಿದ ಮಾರ್ಗಗಳು ಯಾವುವು ? ವಿಶದಪಡಿಸಿರಿ.

**ಅಥವಾ**

ಭಾರತೀಯ ಸಂಸ್ಕೃತಿಯ ಬಗೆಗೆ ಹೆಮ್ಮೆ ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಕಾರಂತರು ತಮ್ಮ ಪ್ರಬಂಧದಲ್ಲಿ ಹೇಗೆ ಪ್ರತಿಪಾದಿಸಿದ್ದಾರೆ ?

3) ದೇವೇಂದ್ರ ಮತ್ತು ಅವನ ತಂದೆಯ ಸಂಬಂಧಗಳು 'ಮಣ್ಣು' ನೀಳ್ಗತೆಯಲ್ಲಿ ಹೇಗೆ ಅನಾವರಣಗೊಂಡಿದೆ ?

**ಅಥವಾ**

ಅಕಾಲಿಕ ಮಳೆ ಹಾಗೂ ಇತರ ಪ್ರತಿಕೂಲ ಪರಿಸ್ಥಿತಿಗಳು ದೇವೇಂದ್ರನು ಊರಿಗೆ ಮರಳಲು ಅಸಾಧ್ಯವಾದ ಸನ್ನಿವೇಶವನ್ನು ತಂದೊಡ್ಡಿದ ಬಗೆಯನ್ನು ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

1) ಬಾಹುಬಲಿಯ ವ್ಯಕ್ತಿತ್ವದ ಅನನ್ಯತೆಯನ್ನು 'ದಿಗಂಬರ ಧ್ಯಾನ' ಕವಿತೆ ಹೇಗೆ ಚಿತ್ರಿಸಿದೆ ? ತಿಳಿಸಿ.

**ಅಥವಾ**

ಜನಪದ ಕಾವ್ಯ ಭಾಗದಲ್ಲಿ ಮಾತೃಮೂಲ ಕುಟುಂಬದ ಸಂಕೇತವಾಗಿ ಕಾಳಮ್ಮ ಚಿತ್ರಿತವಾಗಿರುವ ಬಗೆಯನ್ನು ನಿರೂಪಿಸಿರಿ.

2) ಮಂಗಳೂರು ಬಸ್ಸುಗಳು ಹಾಸ್ಯ ಬರಹದ ಸ್ವಾರಸ್ಯವೇನು ?

**ಅಥವಾ**

ವಿಧವಾ ವಿವಾಹ ಪ್ರಸಂಗವನ್ನು ಗೌರಮ್ಮನವರು ಕ್ರಾಂತಿಯಾಗಿಸಿದ ಬಗೆ ಹೇಗೆ ? ಚರ್ಚಿಸಿರಿ.

3) 'ಮಣ್ಣು' ನೀಳ್ಗತೆಯಲ್ಲಿ ಮೂಡಿಬಂದ ದೇವೇಂದ್ರ ಹಾಗೂ ಆತನ ಸಹೋದರರ ಪಾತ್ರ ಪರಿಚಯವನ್ನು ಮಾಡಿ.

**ಅಥವಾ**

ಹೈದರಾಬಾದಿನ ಸಹಪಾಠಿಗಳೊಂದಿಗೆ ದೇವೇಂದ್ರನ ಸಂಬಂಧವನ್ನು ಬರೆಯಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಸ್ವಾರಸ್ಯಸಹಿತ ಬರೆಯಿರಿ : **(1×5=5)**

ಮರನೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪದ ತೋಱದಂತಿರಿಸಿದೆ
ಶರೀರದೊಳಗೆ ಆತ್ಮನನಾರೂ ಕಾಣದಂತಿರಿಸಿದೆ –
ನೀ ಬೆರೆಸಿಹ ಭೇದಕ್ಕೆ ಬೆರಗಾದೆನಯ್ಯ ರಾಮನಾಥ

**ಅಥವಾ**

ಊರುಗಳನುಡಿವೆನೊದೆವೆಂ
ಕೌರವ ಪರಿವೃಥನ ಮಕುಟಮಂ ವೇಣಿಸಂ
ಹಾರಂಮಾಡುವೆನದಱಿಂ
ಭಾರಮದಿನಿತಲ್ಲದೆನ್ನ ಪರಿಭವ ಭಾವಂ.

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **(2×4=8)**

1) ಮಣಿಕನಕಂ ವಿಭೂಷಣಗಳಂ ಕೊಟ್ಟು ಪೆಂಡಿರೊಲ್ವರೆ.

2) ಮಳೆಯು ಎಳೆಯುವ ತೇರಿಗೆ.

3) ಬಣಬೆಯೊಲು ಬೆಳೆದ ಈ ಫೈಲುಗಳ ನೆಳಲಲ್ಲಿ.

4) ಮುಳ್ಳಿನೊಂದಿಗಿನ ಸ್ನೇಹದಲ್ಲಿ ನಗುವ ಗುಲಾಬಿಯಾಗು.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(8×1=8)**

1) ರನ್ನನ ಆಶ್ರಯದಾತ ಯಾರು ?

2) ದಾಸಿಮಯ್ಯನ ಅಂಕಿತನಾಮ ಯಾವುದು ?

3) 'ಬೇವಿನ ಹಟ್ಟಿ ಕಾಳಮ್ಮನ ಸಾಲು' ಕಾವ್ಯ ಭಾಗವನ್ನು ಯಾರು ಸಂಪಾದಿಸಿದರು ?

4) ಕೊಡಗಿನ ಗೌರಮ್ಮನವರ ಹೆತ್ತವರ ಹೆಸರೇನು ?

5) ಕಾರಂತರು ಬರೆದ ಮೊದಲ ಕಾದಂಬರಿ ಯಾವುದು ?

6) 'ವಕ್ರದೃಷ್ಟಿ' ಇದು ಯಾರ ಬರೆದ ನಗೆಬರಹ ?

7) ಗಿರಡ್ಡಿಯವರಿಗೆ ಸಲ್ಲಿಕೆಯಾದ ಅಭಿನಂದನಾ ಗ್ರಂಥದ ಹೆಸರೇನು ?

8) ಗಿರಡ್ಡಿ ಗೋವಿಂದರಾಜರು ಯಾವ ಜಿಲ್ಲೆಯವರು ?